ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ.

ರೈತರ ಸಾಲ ಮನ್ನಾ ಮಾಡುವ ವಿಚಾರ.

+ ಶ್ರೀ ಬಿ.ಎಸ್.ಯಡಿಯೂರಪ್ಪ: (ಶಿಕಾರಿಪುರ):- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ತಮ್ಮ ಕಡೆಗೆ ಬಂದಾಗ ಇವತ್ತು ಮಧ್ಯಪ್ರದೇಶದಲ್ಲಿ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಒಂದು ಸರ್ಕಾರಿ ಆಜ್ಞೆ ಇಲ್ಲವೆನ್ನುವ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ತಮ್ಮ ಅವಗಾಹನೆಗೆ ಈ ಪ್ರತಿಯನ್ನು ಕಳುಹಿಸಿಕೊಡುತ್ತಿದ್ದೇನೆ.

(ಪ್ರತಿಯನ್ನು ಕಳುಹಿಸಿಕೊಡುತ್ತಾರೆ)

ಇವತ್ತು ನಮ್ಮ ರಾಜ್ಯಪಾಲರಿಂದ ಬಹಳ ಸ್ಪಷ್ಟವಾದ ಕ್ರಮಾಂಕ ಮಾನ್ಯ ಅಧ್ಯಕ್ಷಿಣಿಯವರಿಗೆ ಮತ್ತು ಸರ್ಕಾರಕ್ಕೆ ಒಂದು ಕಾಪಿಯನ್ನು ಕಳುಹಿಸಿಕೊಡುತ್ತೇನೆ. ರಾಜ್ಯಪಾಲರ ಅಂಕಿತಗೊಂಡಿರತಕ್ಕಂಥ ಮಧ್ಯಪ್ರದೇಶದ ರೈತರ ಸಾಲ ಮನ್ನಾ ಯೋಜನೆ ಬಗ್ಗೆ ಸರ್ಕಾರದ ಆಜ್ಞೆ ಇದೆ. ಗೌರ್ನರ್ ಸಹಿ ಮಾಡಿರುವಂಥದ್ದನ್ನು ಕಳುಹಿಸಿದ್ದೇನೆ. ಅದರ ಕ್ರಮಾಂಕ 5-12-90 - 15 ಆಬ್ಲಿಕ್ 7-9-1991, ಇವತ್ತು ಮಧ್ಯಪ್ರದೇಶದ ಸರ್ಕಾರ.

ಉಪಾಧ್ಯಕ್ಷಿಣಿಯವರು :- ವಿವರಗಳು ಬೇಡ ಅದರ ಪ್ರತಿಯನ್ನು ಕಳುಹಿಸಿಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಇವತ್ತು ಮಧ್ಯ ಪ್ರದೇಶದ ರೈತರ ಸಾಲ ಮನ್ನಾ ಯೋಜನೆಯಲ್ಲಿ ಕೆಲವು ಷರತ್ತುಗಳನ್ನು ಸರ್ಕಾರ ಏನು ಹಾಕಿತ್ತು, ಷರತ್ತುಗಳನ್ನು ತೆಗೆದುಹಾಕಿ 2-10-89 ರಿಂದ 1-10-91 ರವರೆಗೆ ವಿಸ್ತರಣೆಮಾಡಿ ಪೂರ್ಣ ಮನ್ನಾ ಮಾಡುವಂಥದ್ದು, 10 ಸಾವಿರಕ್ಕೆ ಮೇಲ್ಪಟ್ಟಿರತಕ್ಕಂತವರು ಹಣವನ್ನು ವಾಪಸ್ ಕಟ್ಟಿದ ಮೇಲೆ ಸ್ಥಾಲ ಮನ್ನಾ ಮಾಡುವಂಥ ಯೋಜನೆ ಇದು. ಅದೇ ರೀತಿಯಲ್ಲಿ ನೇಕಾರರು ಮತ್ತು ಕೃಷಿಕರಿಗೆ ಸಾಲ ಮನ್ನಾ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡುವಾಗ ನಮ್ಮ ಒಂದು ನಿಯೋಗ ಹೋಗುವಂಥ ಒಂದು ಭರವಸೆಯನ್ನು ಕೊಟ್ಟಿದ್ದರು. ಆ ಒಂದು ಪ್ರತಿಯನ್ನು ತರಿಸಿಕೊಡಿ ಖಂಡಿತವಾಗಿಯೂ ಅದರ ಬಗ್ಗೆ ಪರಿಶೀಲನೆ ಮಾಡಿ ನಮ್ಮ ರಾಜ್ಯದಲ್ಲಿಯೂ ಸಹಿತ ನೆನೆಗುದಿಗೆ ಬಿದ್ದಿರುವ ಸಾಲ ಮನ್ನಾ ಯೋಜನೆ ಏನಿದೆ ಅದನ್ನು ಮಾಡುತ್ತೇವೆನ್ನುವ ಆಶ್ವಾಸನೆಯನ್ನು ಕೊಟ್ಟಿದ್ದೇವೆಂದು ಹೇಳಿದ್ದರು. ಇವತ್ತು ನಾನು ಸರ್ಕಾರಕ್ಕೆ ಏನು ಹೇಳುತ್ತೇನೆಂದರೆ, ತಪ್ಪು ಮಾಹಿತಿಯನ್ನು ನೀಡುವಂಥಾದ್ದು ರಾಜ್ಯದಲ್ಲಿ ಆಗಬಾರದು. ದಯವಿಟ್ಟು ಹಿರಿಯ ಸಚಿವರಾದ ಮಾನ್ಯ ವೀರಪ್ಪ ಮೊಯಿಲಿಯವರು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬೇಕು. ಇವತ್ತು ಮಧ್ಯಪ್ರದೇಶದ ಸಾಲ ಮನ್ನಾ ಯೋಜನೆಯನ್ನು ಜಾರಿಗೆ ಕೊಟ್ಟಿರುವ ಬಗ್ಗೆ ಆಜ್ಞೆಯನ್ನು ತಂದು ಕೊಟ್ಟರೆ ಅದನ್ನು ಪರಿಶೀಲನೆ ಮಾಡೋಣ, ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡೋಣವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಅದರ ಬಗ್ಗೆ ತಪ್ಪು ಮಾಹಿತಿ , ತಪ್ಪು ಗ್ರಹಿಕೆ ರಾಜ್ಯದಲ್ಲಿ ಇದೆ. ಅದು ಹೋಗಬೇಕೆನ್ನುವ ದೃಷ್ಟಿಯಿಂದ ಆಜ್ಞೆಯನ್ನು ತಂದುಕೊಟ್ಟಿದ್ದೇನೆ. ಅದಕ್ಕೆ ಏನಾದರೂ ಕೊನೆಮಾಡಿ ದಯವಿಟ್ಟು ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಂಡು 10 ಸಾವಿರದವರೆಗಾದರೂ ರೈತರ ಸಾಲ ಮನ್ನಾ ಮಾಡಲು ತಾವು ವ್ಯವಸ್ಥೆಮಾಡಿ ಇವತ್ತು ರೈತರು ಏನು ಕಂಗಾಲಾಗಿದ್ದಾರೆ ಅದಕ್ಕೆ ಏನಾದರೂ ಒಂದು ತೀರ್ಮಾನಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಮಧ್ಯಪ್ರದೇಶದಲ್ಲಿ ಸಾಲ ಮನ್ನಾ ಯೋಜನೆಯನ್ನು ಜಾರಿಗೆ ತಂದ ಆಜ್ಞೆ ಬಂದಿದೆ. ಈ ಬಗ್ಗೆ ಸರ್ಕಾರ ಪರಿಪೂರ್ಣವಾಗಿ ತೀರ್ಮಾನಕ್ಕೆ ಬರಲಿ. ಆಜ್ಞೆಯ ಪ್ರತಿಯನ್ನು ತಮಗೆ ಕೊಟ್ಟಿರುವುದರಿಂದ ರೈತರ ಸಾಲ ಮನ್ನಾ ಬಗ್ಗೆ ನಿರ್ದಿಷ್ಟವಾದ ನಿಲುವನ್ನು ಹೇಳಲಿ.

ಶ್ರೀ ಸಿ.ಬೈರೇಗೌಡ :- ಇವತ್ತು ಸಭೆ ಮುಂದಕ್ಕೆ ಹೋಗುತ್ತದೋ ಏನೋ ಗೊತ್ತಿಲ್ಲ. ರೈತರ ಸಾಲ ಮನ್ನಾ ವಿಚಾರವನ್ನು ಬಹಳ ತೀವ್ರವಾಗಿ ಗಮನಿಸಬೇಕು. ಇದು ಅನೇಕ ವರ್ಷಗಳಿಂದ ಮುಂದಕ್ಕೆ ಹೋಗುತ್ತಿದೆ.

ರೈತರು ಸಾಲವನ್ನು ವಾಪಸ್ಸು ಕೊಡುತ್ತಿಲ್ಲ. ಸಹಕಾರ ಸಂಘಗಳ ಕೆಲಸ ಸ್ಥಗಿತವಾಗಿದೆ. ಯಾವ ಬ್ಯಾಂಕಿನಲ್ಲೂ ರೈತರಿಗೆ ಸಾಲ ಹುಟ್ಟುತ್ತಿಲ್ಲ. ಕಾರಣವೇನೆಂದರೆ, ರೈತರು ಬಾಕಿದಾರರಾಗಿದ್ದಾರೆ. ಇದನ್ನು ಸರ್ಕಾರ ಪ್ರತಿಷ್ಠೆಯಾಗಿ ಪರಿಗಣಿಸದೆ, ನಾವು ಹೇಳುತ್ತಿದ್ದೇವೆ ಎಂಬುದನ್ನು ಬಿಟ್ಟು ವಾಸ್ತವಾಂಶವನ್ನು ಗಮನಿಸಬೇಕು. ಮಧ್ಯ ಪ್ರದೇಶದಲ್ಲಿ ಏನುಮಾಡಿದ್ದಾರೆ ಅದೇ ರೀತಿ ಮಾಡಿ ಎಂದು ಹೇಳುವುದಿಲ್ಲ. ನಮಗೆ ಅನುಗುಣವಾಗುವಂತೆ, ನಮ್ಮ ರಾಜ್ಯ ಸರ್ಕಾರಗಳಿಗೆ ಎಷ್ಟು ಚೈತನ್ಯ ಇದೆ ಅದನ್ನು ಅನುಸರಿಸಿ ಮಾಡಿ. ಕೊನೇಪಕ್ಷ ಒಂದು ವರ್ಕಬಲ್ ಪ್ರೊಪೋಸಿಷನ್ ಹೇಳುತ್ತಿದ್ದೇನೆ. ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಒನ್ ಟೈಂ ಆಪರೇಷನ್ ಆಗಿ ಮಾಡಿ ಏನು ರೈತರು ಇದ್ದಾರೆ, ಎಷ್ಟು ಸಾಲ ವಾಪಸ್ಸು ಕೊಡಬೇಕೆಂಬ ವಿಚಾರ ಇದೆ ಅದನ್ನು ವಿಚಾರ ಮಾಡಿ ರೈತರು ಹಿಂದಕ್ಕೆ ಬೀಳುವುದಕ್ಕೆ ಬದಲಾಗಿ ಅವರು ಮುಂದೆ ಬಂದು ಸಾಲ ವಾಪಸ್ಸು ಕೊಡುವಂತಹ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಬಡ್ಡಿ, ಸುಸ್ತಿ ಬಡ್ಡಿಯನ್ನು ಒನ್ ಟೈಂ ಆಪರೇಷನ್ ಆಗಿ ಮಾಡುವುದಕ್ಕೆ ಅವಧಿ ಕೊಡಲಿ. ಯಾರು ಯಾರು ಸಾಲ ವಾಪಸ್ಸು ಕೊಡುತ್ತಾರೆ, ಅವರಿಗೆ ಫೆಸಿಲಿಟೀಸ್ ಸಿಗುತ್ತದೆಂದು ಹೇಳುವುದನ್ನು ಒಪ್ಪಿಕೊಂಡರೆ ಒಳ್ಳೆಯದು. ಇದನ್ನು ಪ್ರತಿಷ್ಠೆಯಾಗಿ ಮಾಡುವುದು ಬೇಡ. ಇದನ್ನು ಸರ್ಕಾರ ಒಪ್ಪಿಕೊಳ್ಳಬೇಕು. ಇದು ಬಹಳ ತೀವ್ರವಾದ ವಿಚಾರ.

ಶ್ರೀ ವಾಟಾಳ್ ನಾಗರಾಜ್ :-ಇದು ಬಹಳ ಮುಖ್ಯವಾದ ವಿಚಾರ. ಮಧ್ಯಪ್ರದೇಶದ ಆಜ್ಞೆ ಇದೆ. ನಾವು ಏನು ಹೇಳುತ್ತಿದ್ದೇವೆ ಅದಕ್ಕೆ ಸರ್ಕಾರ ಗಮನ ಕೊಡುತ್ತಿಲ್ಲವಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ :- ಬಹಳ ಹಿಂದಿನಿಂದ ರೈತರ ಸಾಲದ ಮನ್ನಾ ಬಗ್ಗೆ ಹೇಳುತ್ತಿದ್ದೇವೆ. ಈ ವಿಚಾರ ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿದೆ. ಇದಕ್ಕೆ ಏನಾದರೂ ಪರಿಹಾರ ಕಂಡುಹಿಡಿಯಬೇಕು. ನಾನು ತಮ್ಮಲ್ಲಿ ಕೇಳುತ್ತೇನೆ, ಸದನ ಇವತ್ತು,ನಾಳೆ, ನಾಡಿದ್ದು ಮುಗಿಯುತ್ತದೋ ಗೊತ್ತಿಲ್ಲ.

(ಶ್ರೀ ಆರ್.ಎನ್.ನಾಯಕ್‌ರವರು ಮಧ್ಯೆ ಮಾತನಾಡಿದರು)

ಶ್ರೀ ಡಿ.ಬಿ.ಚಂದ್ರೇಗೌಡ :- ಏತಕ್ಕೆ ಇವರು ಮಧ್ಯೆ ಪ್ರವೇಶ ಮಾಡುತ್ತಾರೆಂದು ಗೊತ್ತಿಲ್ಲ. ನಾನು ಎದ್ದ ಕೂಡಲೇ ಬ್ಯಾಕ್‌ಗ್ರೌಂಡ್ ಹಾರ್ಮೋನಿಯಂ ಮ್ಯೂಸಿಕ್ . . . .

ಶ್ರೀ ಆರ್.ಎನ್.ನಾಯಕ್ :- ನಾವು ಮಾತನಾಡಿದರೆ ಇವರಿಗೆ ಹಾರ್ಮೋನಿಯಂ ಕೇಳಿದ ಹಾಗೆ ಕೇಳುತ್ತೆ. ನೀವು ಮಾತನಾಡಿದರೆ ಹೇಗೆ ಕೇಳುತ್ತದೆಂದು ಹೇಳಬೇಕು. ನೀವು ಮಾತನಾಡಿದರೆ ಬಹಳ ಮಧುರವಾಗಿ ಕೇಳುತ್ತದೆ.

ಶ್ರೀ ಡಿ.ಬಿ.ಚಂದ್ರೇಗೌಡ :- ನಾಯಕರು ಅಪ್ಪಣೆ ಕೊಟ್ಟಿದ್ದಾರೆಂದರೆ ಪಾಲಿಸುತ್ತೇನೆ. ಏಕೆಂದರೆ ಅವರು ನಾಯಕರು. ಯಾವುದಕ್ಕೂ ಕ್ರಮ ರೀತಿ, ನೀತಿ ಇರಬೇಕು.

(ಗೊಂದಲ)

ಶ್ರೀ ಆರ್.ಎನ್.ನಾಯಕ್:- ರೀತಿ ನೀತಿ ಬಗ್ಗೆ ನಾನು ಹೇಳುತ್ತೇನೆ. ಇಡೀ ಸಭೆಯನ್ನು ನೋಡುತ್ತಿದ್ದೇನೆ, 4 ಜನರು ನಿಂತಿದ್ದಾರೆ. ಬೈರೇಗೌಡರು, ವಾಟಾಳ್ ನಾಗರಾಜ್ ಎಲ್ಲರೂ ನಿಂತಿದ್ದರು, ಆಗ ನೀವು ಹೇಳಲಿಲ್ಲ.

ಶ್ರೀ ಸಿ.ಬೈರೇಗೌಡ :- ಇಲ್ಲಿ ನಿಮಗಿಂತ ಮೇಲಕ್ಕೆ ಯಾರಾದರೂ ಇದ್ದಾರೆಯೆ ? ನಾವು ಮಾತನಾಡಬೇಕಾದರೆ ಅಧ್ಯಕ್ಷರ ಅಪ್ಪಣೆ, ಪರವಾನಗಿ ಪಡೆದು ಮಾತನಾಡುತ್ತೇವೆ.

ಉಪಾಧ್ಯಕ್ಷಿಣಿಯವರು :- ಶ್ರೀಯುತ ನಾಯಕ್ ಅವರೆ , ದಯವಿಟ್ಟು ತಾವು ಮಾತನಾಡಿ. ಮಾತನಾಡುವುದು ಬೇಡ ಎಂದು ಹೇಳುವುದಿಲ್ಲ. ಯಾರು ಮಾತನಾಡುತ್ತಿದ್ದಾರೆ ಅವರ ಪರ್ಮಿಷನ್ ತೆಗೆದುಕೊಂಡು ಅವರು ಈಲ್ಡ್ ಆದರೆ ತಾವು ಮಾತನಾಡುವುದಕ್ಕೆ ಅವಕಾಶ ಇದೆ. ತಾವು ಮಾತನಾಡಿ. ಬೇಡ ಎಂದು ಹೇಳುವುದಿಲ್ಲ. ಅಥವಾ ಅಧ್ಯಕ್ಷರನ್ನು ಕೇಳಿ ಅವರ ಅಪ್ಪಣೆ ಪಡೆದು ಮಾತನಾಡಿದರೆ ಪರ್ವಾಗಿಲ್ಲ.

ಸುಮ್ಮನೆ ನಿಂತು ಮಾತನಾಡಬಾರದು.

ಶ್ರೀ ಆರ್.ಎನ್.ನಾಯಕ್ :- ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ದಯವಿಟ್ಟು ಅವಕಾಶ ಕೊಡಿ.

ಉಪಾಧ್ಯಕ್ಷಣಿಯವರು :-ಈಗ ಅವರು ಮಾತನಾಡುತ್ತಿದ್ದಾರೆ.

ಶ್ರೀ ಆರ್.ಎನ್.ನಾಯಕ್ :- ನೀವು ಪರ್ಮಿಷನ್ ಪಡೆದು ಮಾತನಾಡಿ ಎಂದು ಹೇಳಿದ್ದೀರಿ, ಸಂತೋಷ. ಅದು ನನ್ನ ಕರ್ತವ್ಯವೂ ಹೌದು. ಅದು ಪ್ರತಿಯೊಬ್ಬರ ಕರ್ತವ್ಯವೂ ಹೌದು. ಆದರೆ ಮುಂದಿನ ಸಾಲಿನಲ್ಲಿ ನಾಲ್ಕು ನಿಮಿಷಗಳ ಕೆಳಗೆ ನಾಲ್ಕು ಜನ ಸಾಲಾಗಿ ನಿಂತಿದ್ದರು. ಅವರು ನಿಮ್ಮ ಪರ್ಮಿಷನ್ ಪಡೆದಿದ್ದರೆ?

ಉಪಾಧ್ಯಕ್ಷಣಿಯವರು:- ಇಬ್ಬರೂ ಪರಿಪಾಲಿಸಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ:-ಮಾನ್ಯ ಉಪಾಧ್ಯಕ್ಷರೆ, ಬೇರೆ ಸದಸ್ಯರು ಮಾತನಾಡುವಾಗ ಮಧ್ಯೆ ಏಳುವ ಸ್ವಭಾವ ನನಗೆ ಇಲ್ಲ. ಆ ರೀತಿ ಎಂದೂ ನಾನು ಎದ್ದಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ವಿರೋಧ ಪಕ್ಷದ ನಾಯಕರೆ, ಆರ್.ಎನ್.ನಾಯಕರ ಸ್ವಭಾವವೇನೆಂದರೆ, ಇದುವರೆಗೂ ನಾವು ಹೊರಗಡೆ ಇದ್ದೆವಲ್ಲ ಅಲ್ಲಿಗೆ ಬರುತ್ತಿದ್ದರು. ನೀವಿಲ್ಲದೇ ಸಭೆಯೇ ಸರಿಯಿಲ್ಲ, ದಯಮಾಡಿ ಬರಬೇಕು ಎಂದೆಲ್ಲ ಹೇಳುವುದು,ಇಲ್ಲಿ ಬಂದರೆ ಈ ತರಹ ಮಾಡುವುದು. ವಿರೋಧಪಕ್ಷದ ಸದಸ್ಯರಿಲ್ಲದೆ ಸಭೆಯೇ ಇಲ್ಲ, ಸಂಪೂರ್ಣವಾಗಿ ಸಪ್ಪೆಯಾಗಿದೆ, ನಮ್ಮ ಸರ್ಕಾರವನ್ನು ಕೇಳುವವರೇ ಗತಿ ಇಲ್ಲ ಎಂಬ ಮಾತನ್ನು ಹೊರಗೆ ಬಂದು ಹೇಳುವುದು, ಇಲ್ಲಿ ಬಂದು ಹೀಗೆ ಮಾಡುವುದು.

ಶ್ರೀ ಬಿ.ಹೆಚ್.ಬನ್ನಿಕೋಡ್ :- ವಿಷಯಾಂತರ ಬೇಡ.

ಶ್ರೀ ಡಿ.ಬಿ.ಚಂದ್ರೇಗೌಡ:- ಫ್ಲೋ ಆಫ್ ಥಾಟ್‌ಗೆ ಬರುತ್ತದೆಂದು ಅಷ್ಟೆ. ಮಾತನಾಡಬಾರದು ಎಂಬ ದುರುದ್ದೇಶ ಇಲ್ಲ. ಇದೊಂದು ಸಮಸ್ಯೆ ಬಹಳ ದಿವಸಗಳಿಂದ ನಿರಂತರವಾಗಿ ಒಂದಲ್ಲ ಒಂದು ಕಾರಣಕ್ಕೆ ಪ್ರತಿಯೊಂದು ಅಧಿವೇಶನದಲ್ಲಿ ಚರ್ಚೆ ಮಾಡುತ್ತಿದ್ದೇನೆ. ಇದಕ್ಕೆ ಒಂದು ಅಂತಿಮ ತೆರೆಯನ್ನು ಎಳೆಯಬೇಕು. ಒಂದು ಸಾರಿ ಚರ್ಚೆ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು, ಮಧ್ಯ ಪ್ರದೇಶ ಸರ್ಕಾರ ಇಂಥ ಒಂದು ಯೋಜನೆಯನ್ನು ಜಾರಿಗೆ ತಂದಿಲ್ಲ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಜಾರಿಗೆ ತಂದಿದ್ದಾರೆಂದು ಜವಾಬ್ದಾರಿಯಿಂದ ಶ್ರೀಮಾನ್ ಯಡಿಯೂರಪ್ಪನವರು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಈ ರಾಜ್ಯ ಸರ್ಕಾರ ಈ ವಿಚಾರದಲ್ಲಿ ಏನಾದರೂ ಒಂದು ಮಾಡಬೇಕು. ಶ್ರೀಮಾನ್ ಬೈರೇಗೌಡರು ಒಂದು ಸಲಹೆ ಕೊಟ್ಟಿರು. ಪೂರ್ಣ ಸಾಲ ಮನ್ನಾ ಮಾಡುವುದಕ್ಕೆ ನಿಮ್ಮಿಂದ ಸಾಧ್ಯವಾಗದೇ ಇದ್ದರೆ ಕನಿಷ್ಠ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಒಂದು ಬಾರಿ, ಒನ್ ಟೈಮ್ ಆಪರೇಷನ್ ಮಾಡಲಿಕ್ಕೆ ಏನಾದರೂ ಸರ್ಕಾರ ಆಲೋಚನೆ ಮಾಡುತ್ತದೆಯೇ ? ಇದನ್ನು ಹೇಳುವುದಕ್ಕೆ ಏನು ಕಷ್ಟ ನಿಮಗೆ ? ಇಲ್ಲ ಎಂದರೆ ಇಲ್ಲ ಎಂದು ಒಂದು ಸಾರಿ ಹೇಳಿದೆ.

+ ಶ್ರೀ ಆರ್.ಎಲ್.ಜಾಲಪ್ಪ: (ದೊಡ್ಡಬಳ್ಳಾಪುರ):- ಮಾನ್ಯ ಉಪಾಧ್ಯಕ್ಷರೆ, ಬಹುಶಃ ಸ್ವಾತಂತ್ರ್ಯ ಬಂದಾಗಿನಿಂದ ಈ ಸಹಕಾರಿ ಸಂಸ್ಥೆಗೆ ಇಷ್ಟು ಅಧಃಪತನಕ್ಕೆ ಯಾವತ್ತೂ ಹೋಗಿರಲಿಲ್ಲ. ಇಲ್ಲವೇ, ತಾವು ಸರ್ಕಾರದವರು ಹೇಳಬೇಕು. 10 ಸಾವಿರ ಆಗಲಿ, 1 ಸಾವಿರ ಆಗಲಿ, 2 ಸಾವಿರ ಆಗಲೀ ನಾವು ವಜಾ ಮಾಡುವುದಿಲ್ಲ, ರೈತರ ಸಾಲ ಕಟ್ಟಿ, 5 ಪರ್ಸೆಂಟ್ ನಾವು ಏನು ಇನ್‌ಸೆಂಟೀವ್ ಕೊಡುತ್ತಿದ್ದೇವೆ ಅದನ್ನು ಉಪಯೋಗಿಸಿಕೊಳ್ಳಿ ಎಂದು ಕಟ್ಟುನಿಟ್ಟಾಗಿ ಹೇಳಬೇಕು. ಒಂದು ಕಡೆ 10 ಸಾವಿರ ರೂಪಾಯಿವರೆಗೂ ಇರುವ ಸಾಲವನ್ನು ವಸೂಲು ಮಾಡುವುದಿಲ್ಲ ಎಂದು ಹೇಳುತ್ತಾರೆ, ಇನ್ನೊಂದು ಕಡೆ ಜಪ್ತಿ ವಗೈರೆ ಮಾಡುತ್ತಿದ್ದಾರೆ. ಹೀಗಾಗಿ ಏನಾಗಿದೆಯೆಂದರೆ, ಎಲ್ಲಾ ಸಹಕಾರ ಸಂಘಗಳು ಏನು ಸಾಲ ಕೊಡುತ್ತಿದ್ದವು ಅವು ಇವತ್ತು ಮಲಗಿವೆ. ಇಷ್ಟು ಅಧಃಪತನಕ್ಕೆ ಯಾವತ್ತೂ ಬಂದಿರಲಿಲ್ಲ. ಸಾಲ ವಜಾ ಮಾಡುವುದಿಲ್ಲ ಎಂದು ಹೇಳಿ, ಸರ್ಕಾರ ರೈತರನ್ನು

ಹಾಳು ಮಾಡುತ್ತಿದೆ. ಕೇಂದ್ರ ಸರ್ಕಾರ ಕೊಟ್ಟರೆ ನಾವು ಕೊಡುತ್ತೇವೆ ಎಂದು ಹೇಳುವುದು ಬೇಡ. 10 ಸಾವಿರದಲ್ಲಿ 5 ಸಾವಿರ ಅವರು ಕೊಟ್ಟರೆ 5 ಸಾವಿರ ನಾವು ಕೊಡುತ್ತೇವೆ ಎಂದು ತಾವು ಹೇಳುತ್ತೀರಿ. ಅವರ 5 ಸಾವಿರ ಬೇಡ. ನೀವು ಏನಾದರೂ 5 ಸಾವಿರ ಕೊಡುತ್ತೀರಾ ? 5 ಸಾವಿರ ಆದರೂ ವಜಾ ಮಾಡುತ್ತೀರಾ ? ನಿಮ್ಮ ಎಕನಾಮಿಕ್ ಪೊಸಿಷನ್‌ನಲ್ಲಿ ಅದು ಸಾಧ್ಯವಿಲ್ಲದ ಕೆಲಸ. ಆದ್ದರಿಂದ ಸ್ಪೆಸಿಫಿಕ್ಕಾಗಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ. ಮಾನ್ಯ ಬೈರೇಗೌಡರು ಒಂದು ಸಲಹೆ ಮಾಡಿದರು. ಹೋಗಲಿ ಬಡ್ಡಿ, ಸುಸ್ತಿ ಬಡ್ಡಿ ಬಿಟ್ಟುಬಿಡಿ, ಒನ್ ಟೈಂ ಆಪರೇಷನ್ ಮಾಡಿ ಎಂದು ಹೇಳಿದರು. ಯಾವುದಾದರೂ ಒಂದು ಕನ್‌ಸಿಡರ್ ಮಾಡಿ, ಇಲ್ಲದಿದ್ದರೆ ಕಷ್ಟವಾಗುತದೆ. ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಸಾಲ ಸಿಗುವುದಿಲ್ಲ. ಅಪೆಕ್ಸ್ ಬ್ಯಾಂಕ್‌ನಿಂದ ಸಾಲ ಸಿಗುವುದಿಲ್ಲ. ಜಿಲ್ಲಾ ಬ್ಯಾಂಕ್‌ನಿಂದ ಸಾಲ ಕೊಡುತ್ತಿಲ್ಲ. ರೈತರನ್ನು ದೇವರೇ ಕಾಪಾಡಬೇಕು. ಗೊಬ್ಬರದ ಬೆಲೆ ಜಾಸ್ತಿಯಾಯಿತು. ಹೀಗಾಗಿ ಪ್ರೊಡಕ್ಟಿವಿಟಿ ಮೇಲೆ ಇದರ ಎಫೆಕ್ಟ್ ಏನಾಗುತ್ತದೆಯೆಂದು ಯೋಚನೆ ಮಾಡಿ. ಯಾವುದಾದರೂ ಕಡ್ಡಾಯವಾಗಿ ಹೇಳಿ, ಆಗುತ್ತದೋ ಇಲ್ಲವೋ ಎಂದು ಹೇಳಿ. ಮಾನ್ಯ ಅಧ್ಯಕ್ಷರೇ, ಸಹಕಾರ ಇಲಾಖೆ ಏನಿದೆ ಅದು ನಾಮಿನೇಷನ್ ಮಾಡಿಕೊಂಡು ಕುಳಿತಿದೆ. ಮತ್ತು ಡೈರೆಕ್ಷನ್ ಕೊಟ್ಟು ರಿಟರ್ನಿಗ್ ಆಫೀಸರ್ಸ್ ಹತ್ತಿರ ಮಾಡಬಾರದ ಕೆಲಸ ಮಾಡಿಸುವುದಕ್ಕೆ ತಯಾರಾಗಿದೆಯೇ ವಿನಾ ಬೇರೆ ಏನೂ ಮಾಡುತ್ತಿಲ್ಲ. ಮಾನ್ಯ ಮಂತ್ರಿಗಳ ಕಚೇರಿಯಲ್ಲಿ ಬೇರೆ ಏನೂ ಕೆಲಸ ನಡೆಯುತ್ತಿಲ್ಲ. ಇಂಥ ಸಹಕಾರಿ ಮಂತ್ರಿಗಳನ್ನು ಯಾವತ್ತೂ ನೋಡಿರಲಿಲ್ಲ. ಸಹಕಾರಿ ರಂಗದಲ್ಲಿ ನಾನು ಕೆಲಸ ಮಾಡಿದ್ದೇನೆ. ಸಹಕಾರಿ ಮಂತ್ರಿಗಳು ತಮ್ಮ ಆಫೀಸಿನಿಂದ ರಿಟರ್ನಿಗ್ ಆಫೀಸರ್ಸ್‌ಗೆ ಡೈರೆಕ್ಷನ್ ಕೊಡುತ್ತಿದ್ದಾರೆ. ಡೆಪ್ಯುಟಿ ರಿಜಿಸ್ಟ್ರಾರ್‌ಗೆ, ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗೆ ಡೈರೆಕ್ಷನ್ ಕೊಡುತ್ತಿದ್ದಾರೆ. ಡೈರೆಕ್ಷನ್ ಕೊಟ್ಟು ಎಲೆಕ್ಷನ್‌ನಲ್ಲಿ ಇಂಟರ್‌ಫಿಯರ್ ಆಗುವುದು ಬಿಟ್ಟರೆ ಸಹಕಾರ ಸಂಘಗಳನ್ನು ಸುಧಾರಿಸತಕ್ಕ ಸ್ಥಿತಿಯಲ್ಲಿ ಮಂತ್ರಿಗಳಾಗಲೀ, ಸರ್ಕಾರವಾಗಲಿ ಇಲ್ಲ. ಯಾವುದಾದರೂ ಒಂದು ತೀರ್ಮಾನ ಕೊಡಿ. ಈಗ ಸುಮ್ಮನೆ ಹಾಳು ಮಾಡುವುದು ಬೇಡ. ಮಧ್ಯಪ್ರದೇಶದ ಆಚ್ಛೆಯ ಎಕ್‌ಸ್ಕ್ಯಾಕ್ಟ್ ತಂದು ಕೊಟ್ಟಿದ್ದಾರೆ. ಮಧ್ಯಪ್ರದೇಶದ ಸರ್ಕಾರಕ್ಕೆ ಶಕ್ತಿ ಕೊಡುವುದಕ್ಕೆ ಇರಬಹುದು. ನಮ್ಮ ಸರ್ಕಾರಕ್ಕೆ ಶಕ್ತಿ ಇಲ್ಲದೇ ಇರಬಹುದು. Atleast they should come out with the truth. They should tell the farmers that it is not possible.

ಉಪಾಧ್ಯಕ್ಷರು:- ಸರ್ಕಾರದ ಕಡೆಯಿಂದ ಏನಾದರೂ ಹೇಳುವುದು ಇದೆಯೇ ?

(ಗೊಂದಲ)

ಶ್ರೀ ಆರ್.ಎಲ್.ಜಾಲಪ್ಪ:- ಸ್ವಾಮಿ ರಿಟರ್ನಿಂಗ್ ಆಫೀಸರ್ ಹತ್ತಿರ ನಾವು ಯಾವತ್ತೂ ಇಂಟರ್‌ಫಿಯರ್ ಆಗಿಲ್ಲ. ಈಗ ನೀವು ಡಿಫೆಂಡ್ ಮಾಡುವುದಕ್ಕೆ ಬರಬೇಡಿ. ಅದೂ ಮಾನ್ಯ ಚಿಕ್ಕೇಗೌಡರು ಈ ವರ್ಷನ್ ಮಾಡುವುದಾದರೆ ಈ ಸರ್ಕಾರವನ್ನು ಶ್ರೀರಾಮನೇ ಕಾಪಾಡಬೇಕು. ನಾವು ಇಂಟರ್‌ಫಿಯರ್ ಮಾಡಿಲ್ಲ. ದಯವಿಟ್ಟು ಅದನ್ನು ಹೇಳಬೇಡಿ. ನಾನೂ 4-5 ವರ್ಷ ಸರ್ಕಾರದಲ್ಲಿ ಸಹಕಾರಿ ಮಂತ್ರಿ ಆಗಿದ್ದೆ. ಒಂದು ಇಂಟರ್‌ಫಿಯರೆನ್ಸ್ ತೋರಿಸಿ. ಎಲ್ಲಾದರೂ ಇಂಟರ್‌ಫಿಯರ್ ಆಗಿ ರಿಟರ್ನಿಗ್ ಆಫೀಸರ್ಸ್ ಜೊತೆ ಇಂತಹವನದ್ದು ವಜಾ ಮಾಡಿ, ಇಂತಹವನದ್ದು ಅಕ್ಸೆಪ್ಟ್ ಮಾಡಿ ಎಂದು ಹೇಳಿದ್ದರೆ ನಾನು ಈ ಸದಸ್ಯತನಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತೇನೆ. ನೀವು ಮಾಡುತ್ತಿರುವ ಅನ್ಯಾಯವನ್ನು ಡಿಫೆಂಡ್ ಮಾಡುವುದಕ್ಕೆ ನನ್ನನ್ನು ಉದಾಹರಣೆ ತರಬೇಡಿ. ನನಗೂ ಸ್ವಲ್ಪ ಮಾನ ಮರ್ಯಾದೆ ಇದೆ. ದಯವಿಟ್ಟು ಸ್ವಲ್ಪ ಅರ್ಥಮಾಡಿಕೊಳ್ಳಿ. ನಾನು ಈ ಇಲಾಖೆಯನ್ನು ನಡೆಸುವಾಗ ಗೌರವವಾಗಿ ನಡೆಸಿದ್ದೇನೆ.

(ಗೊಂದಲ)

ಶ್ರೀ ಬಿ.ಹೆಚ್.ಬನ್ನಿಕೋಡ್ :(ಹಿರೇಕೆರೂರ್):- ಮಾನ್ಯ ಅಧ್ಯಕ್ಷರೆ, ಇವತ್ತು ಗ್ರಾಮೀಣ ಪ್ರದೇಶದಲ್ಲಿ ರೈತರಿಂದ ಸಾಲದ ವಸೂಲಾತಿ ನಡೆದಿದೆ. ಇವತ್ತು ರೈತರು ದಿವಾಳಿತನದಲ್ಲಿ ಇರುವುದರಿಂದ ಮತ್ತೆ ದಾವೆ, ಕಟ್ಟಳೆ

ಎಂದರೆ ಲಕ್ಷಾಂತರ ರೂಪಾಯಿ ಹೋಗುತ್ತದೆ. ದಾವೆ ಹಾಕುವುದಿಲ್ಲ, ವಸೂಲಾತಿ ಮಾಡುವುದಿಲ್ಲವೆಂದು ತಾವು ಸದನದಲ್ಲಿ ಹೇಳುತ್ತೀರಿ. ಅಲ್ಲಿದಾವೆ ಪ್ರಕರಣ ಹಾಕಲೇಬೇಕು ಎಂದು ಅಧಿಕಾರಿಗಳು ಒತ್ತಾಯ ಮಾಡುತ್ತಿದ್ದಾರೆ. ವಸೂಲಿ ಮಾಡುತ್ತಿದ್ದಾರೆ, ಜಪ್ತಿ ಮಾಡುತ್ತಿದ್ದಾರೆ. ಇಲ್ಲಿರೈತರ ಬಗ್ಗೆ ಸರ್ಕಾರದ ದ್ವಂದ್ವ ನೀತಿಯನ್ನು ನಿಲ್ಲಿಸಬೇಕು. ಎರಡರಲ್ಲಿ ಒಂದು ಆಗಲೇಬೇಕು. ಅವರು ಹೇಳಿದಹಾಗೆ ರೈತರಿಗೆ ಅನುಕೂಲ ಮಾಡುವುದಾದರೆ ಮಾಡಲಿ, ಇಲ್ಲದಿದ್ದರೆ ನಾವು ಮಾಡುವುದುಲ್ಲ ಎಂದು ಸ್ಪಷ್ಟವಾಗಿ ಹೇಳಬೇಕು. ಇದೇ ಮಾನ್ಯ ಮುಖ್ಯಮಂತ್ರಿಯವರಾದ ಬಂಗಾರಪ್ಪನವರು ಶ್ರೀ ವೀರೇಂದ್ರಪಾಟೀಲರ ಮಂತ್ರಿಮಂಡಲದಲ್ಲಿ ಕೃಷಿ ಖಾತೆಯನ್ನು ನಿರ್ವಹಿಸುತ್ತಿದ್ದರು. ಇವರು ಮುಖ್ಯಮಂತ್ರಿಗಳಾಗುವುದಕ್ಕೆ 5 ದಿವಸಗಳ ಮುಂದೆ ನನ್ನ ಕ್ಷೇತ್ರದ ಹಿರೇಕೆರೂರು ತಾಲ್ಲೂಕಿನ ಮದಲೂರಿನಲ್ಲಿ ಬಂದು ರೈತರ ಬಗ್ಗೆ ಮಾತನಾಡುತ್ತಾ ಭರವಸೆ ಕೊಟ್ಟಿದ್ದಾರೆ. ನಾನು ಮುಖ್ಯಮಂತ್ರಿಯಾಗದಿದ್ದರೆ, ಏನು ಬಡ ರೈತರಿದ್ದಾರೆ, ದೀವಾಳಿಯಾಗಿ ಮನೆ, ಮಠ ಇಲ್ಲದವರು ಇದ್ದಾರೆ ಅವರ ಸಾಲವನ್ನು ಮನ್ನಾಮಾಡುತ್ತಿದ್ದೆ ಎಂದು ವೀರೇಂದ್ರ ಪಾಟೀಲರ ಮಂತ್ರಿ ಮಂಡಲದಲ್ಲಿ ಕೃಷಿ ಮಂತ್ರಿಯಾಗಿ ಹೇಳಿದ ಮಾತನ್ನು ಅವರು ಮರೆತಿದ್ದಾರೆ. ಆಗರೆ ಅದನ್ನು ಜನರು ಮರೆತಿಲ್ಲ. ಆ ರೈತರು ಮರೆತಿಲ್ಲ. ಅವರು ಮುಖ್ಯಮಂತ್ರಿಯಾಗ ಮೇಲೆ ಇದನ್ನು ನಡೆಸಿಕೊಡಲೇ ಬೇಕು. ಅವರು ಮಾತಿಗೆ ತಪ್ಪಿದರೆ ಈ ರಾಜ್ಯದ ಜನರು, ಈ ಮುಖ್ಯಮಂತ್ರಿಗಳನ್ನು ಬಿಡುವುದಿಲ್ಲ. ನೇರವಾಗ, ನಿರ್ದಿಷ್ಟವಾಗ ನೀತಿಯನ್ನು ಹೇಳಬೇಕು. ಕೇಂದ್ರ ಸರ್ಕಾರದ ಮೇಲೆ ಹೆಳುವ ಹಾರಿಕೆ ಮಾತಾಗಲೀ ನಮಗೆ ಬೇಡ. ಮಾನ್ಯ ಯಡಿಯೂರಪ್ಪನವರು ಮಧ್ಯಪ್ರದೇಶದಲ್ಲಿ ರೈತರ ಸಾಲ ಮನ್ನಾ ಮಾಡಿರುವ ಬಗ್ಗೆ ಪ್ರತಿ ಕೊಟ್ಟಿದ್ದಾರೆ. ಅಲ್ಲಿ ಅದನ್ನು ಮಾಡಿದ್ದಾರೆ. ಆದರೆ, ಸರ್ಕಾರ ಕೊಟ್ಟ ಮಾತನ್ನು ನಟೆಸಬೇಕು. ಇಲ್ಲದಿದ್ದರೆ ಇದು ಎತ್ಯರ್ಥವಾಗಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾವು ನಿಯೋಗ ಹೋದಾಗ ಮಧ್ಯ ಪ್ರದೇಶದ ಸರ್ಕಾರಿ ಆಜ್ಞೆ ತರಿಸಿಕೊಡಿ ಯಡಿಯೂರಪ್ಪನವರೇ, ಅದನ್ನು ಪರಿಶೀಲನೆ ಮಾಡುತ್ತೇವೆ, ಸಾಲ ಮನ್ನಾದ ಬಗ್ಗೆ ಕಳಕಳಿ ಇದೆ ಂದು ಹೇಳಿದ್ದರು. ಮಧ್ಯಪ್ರದೇಶದಲ್ಲಿ ಇದ್ದರೆ ನಾವು ಮಾಡುತ್ತೇವೆ ಎನ್ನು ಭರವಸೆಯನ್ನು ಕೊಟ್ಟಿದ್ದರು. ಅದಕ್ಕೆ ನಾನು ವಿನಂತಿ ಮಾಡುತ್ತಿದ್ದೇನೆ. ಇವತ್ತು ಬಲಾತ್ಕಾರ ವಸೂಲಿ ಪ್ರಾರಂಭವಾಗಿದೆ. ಮಧ್ಯಪ್ರದೇಶದಲ್ಲಿ ಕೊಟ್ಟಿರುವ ಸರ್ಕಾರದ ಆಜ್ಞೆ ಹಿಂದಿಯಲ್ಲಿ ಇದೆ. ಅದನ್ನು ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿದ್ದೇವೆ. ಅಲ್ಲಿ ಯಾವುದೇ ಷರತ್ತು ಇಲ್ಲದೇ ಸಾಲ ಮನ್ನಾ ಮಾಡಿದ್ದಾರೆ. ಅದನ್ನು ಜಾರಿಗೆ ಕೊಡುವ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ:- ಇವತ್ತು ಇಲ್ಲಿ ತಾವು ಎಲ್ಲಾ ತಡೆಯುತ್ತೇವೆ ಎಂದು ಹೇಳುತ್ತಿದ್ದೀರಿ. ಅಲ್ಲಿ ದಾವಾ ಹಾಕುತ್ತಿದ್ದಾರೆ. ಆರ್ಬಿಟ್ರೇಷನ್ ಫೀಸ್ ಆಡ್ ಮಾಡುತ್ತಿದ್ದಾರೆ. ದಾವಾ ಹಾಕಿದರೆ 3 ಪರ್ಸೆಂಟ್ ಬಡ್ಡಿ ಜಾಸ್ತಿಯಾಗುತ್ತದೆ. 65 ರೂಪಾಯಿ ಆರ್ಬಿಟ್ರೇಷನ್ ಫೀಸ್ ರೈತರು ಕಟ್ಟಬೇಕಾಗಿದೆ. ಇವತ್ತು ನಿಮ್ಮ 5 ಪರ್ಸೆಂಟ್ ಇಂಟರೆಸ್ಟ್‌ನ್ನು ತಾವೇ ತಿನ್ನುತ್ತಿದ್ದೀರಿ. ಈ 5 ಪರ್ಸೆಂಟ್ ರೈತರಿಗೆ ತಲುಪುತ್ತಾ ಇಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ:- ಬಹಳ ಸಂತೋಷದ ವಿಚಾರ. ಬಹಳ ಆನಂದವಾಗಿದೆ, ಇಂದು ಎಲ್ಲಿಲ್ಲದ ಲವಲವಿಕೆ ಕಾಣುತ್ತಾ ಇದೆ. ಎಲ್ಲರೂ ಬಹಳ ಲವಲವಿಕೆಯಿಂದ ಇದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಕೊನೆಯಲ್ಲಾದರೂ ರೈತರ ಹಿತರಕ್ಷಣೆಗೆ ಸರ್ಕಾರ ಬರಬೇಕೆಂದು ಲವಲವಿಕೆಯಿಂದ ಇದ್ದೇವೆ.

ಶ್ರೀ ಎಂ.ವೀರಪ್ಪಮೊಯಿಲಿ:- ಇದು ಮೊದಲಿನಿಂದಲೂ ಇದ್ದರೆ ಬಹಳ ಒಳ್ಳೆಯದಿತ್ತು. ಮಾನ್ಯ ಯಡಿಯೂರಪ್ಪನವರು ಮಧ್ಯಪ್ರದೇಶ ಸರ್ಕಾರದ ಸರ್ಕಾರಿ ಆದೇಶಗಳ ಒಂದು ಪುಸ್ತಿಕೆಯನ್ನು ನಮಗೆ ಕಳುಹಿಸಿದ್ದಾರೆ ಮೊದಲಿನಿಂದಲೂ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಹೇಳುತ್ತಾ ಇದ್ದಾರೆ. ಈ ಬಗ್ಗೆ ನಿರ್ದಿಷ್ಟವಾದ ಮಧ್ಯಪ್ರದೇಶದ ಸರ್ಕಾರಿ ಆದೇಶಗಳನ್ನು ಕೊಟ್ಟರೆ, ಅದನ್ನು ದಯಮಾಡಿ ಕಳುಹಿಸಿ, ನಾವು ಪ್ರಯತ್ನ

ಮಾಡಿದ್ದೇವೆ ಆದು ನಮಗೆ ಸಿಗಲಿಲ್ಲ.

ಶ್ರೀ ಬಿ.ಹೆಚ್.ಬನ್ನಿಕೋಡ್:-ಸರ್ಕಾರಕ್ಕೆ ಆ ಮಾಹಿತಿ ಸಿಗಲಿಲ್ಲವೆಂದರೆ ಇದನ್ನು ಯಾರಾದರೂ ಒಪ್ಪುತ್ತಾರೆಯೆ ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಂತ್ರಿಗಳು ಸಿಟ್ಟು ಮಾಡಿಕೊಂಡರೆ ರೈತರು ಹಾಳಾಗಿ ಹೋಗುತ್ತಾರೆ.

ಶ್ರೀ ಎಂ.ವೀರಪ್ಪ ಮೊಯಿಲಿ: ಯಾವುದಕ್ಕೂ ಇತಿಮಿತಿ ಇರಬೇಕಾಗುತ್ತದೆ. ನೀವು ಮಾತನಾಡಿದ್ದನ್ನೆಲ್ಲ ನಾವು ಸಾವಧಾನದಿಂದ ಕೇಳಿದ್ದೇವೆ. ಈಗ ಮಧ್ಯಪ್ರದೇಶದ ಸರ್ಕಾರದ ಆದೇಶಗಳನ್ನು ಅವರು ಕೊಟ್ಟಿದ್ದಾರೆ. ಅದನ್ನು ಮುಖ್ಯಮಂತ್ರಿಗಳು ಮೊದಲಿನಿಂದಲೂ ಹೇಳುತ್ತಿದ್ದಾರೆ. ದಯಮಾಡಿ ನಿರ್ದಿಷ್ಟವಾದ ಆದೇಶಗಳನ್ನು ಒದಗಿಸಿ, ನಮ್ಮ ಸರ್ಕಾರ ಕೂಡ ಅದರ ಬಗ್ಗೆ ಪರಿಶೀಲನೆ ಮಾಡುತ್ತದೆಂದು ಹೇಳಿದ್ದಾರೆ. ಇದರ ಬಗ್ಗೆ ನಾವು ಕ್ಯಾಬಿನೆಟ್‌ನಲ್ಲಿ ಮಾತನಾಡುತ್ತೇವೆ. ಅದರ ಬಗ್ಗೆ ಸಾಧಕಬಾಧಕಗಳನ್ನು ವಿಚಾರ ಮಾಡಿ ಏನು ಸೂಕ್ತವಾದ ನಿರ್ಣಯ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಕೇಂದ್ರ ಸರ್ಕಾರ ಒಂದು ಯೋಜನೆಯನ್ನು ಕೊಟ್ಟಿದೆ. ಆ ಯೋಜನೆಯ ಪ್ರಕಾರ ಎಲ್ಲ ರಾಜ್ಯಗಳಲ್ಲೂ ಅನುಷ್ಠಾನ ಮಾಡಿದ್ದಾರೆ. ನಮ್ಮ ರಾಜ್ಯ ಕೂಡ ಅನುಷ್ಠಾನ ಮಾಡುತ್ತದೆಂದು ಹೇಳಿದ್ದೇವೆ. ಆದರೆ ಪ್ರಶ್ನೆ ಬಂದದ್ದು ಏನೆಂದರೆ, ಆ ಯೋಜನೆಯ ಪ್ರಕಾರ ಕೆಲವು ಷರತ್ತುಗಳು ಇರುವುದರಿಂದ, ನಿಜವಾಗಿ 10 ಸಾವಿರದೊಳಗೆ ಏನು ಸಾಲ ತೆಗೆದುಕೊಂಡ ರೈತರು ಇದ್ದಾರೆ, ಅವರಿಗೆ ವಾಸ್ತವವಾಗಿ ಪ್ರಯೋಜನ ಸಿಗುವುದಿಲ್ಲ. ನಿಮ್ಮ ವಾದವನ್ನು ಕೂಡ ನಾವು ಒಪ್ಪಿದ್ದೇವೆ. ಮಾನ್ಯ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಅವರು ಒಪ್ಪಿದ್ದಾರೆ. ಆಮೇಲೆ ಮಾನ್ಯ ಬಂಗಾರಪ್ಪನವರು ಕೂಡ ಒಪ್ಪಿದ್ದಾರೆ. ಯಾವ ತರಹ ರೈತರ ಸಮಸ್ಯೆಯನ್ನು ಪರಿಹಾರ ಮಾಡಬಹುದೆನ್ನುವ ಬಗ್ಗೆ ಸಾಕಷ್ಟು ಉಪಾಯಗಳನ್ನು ಸಹ ಹೇಳಿದ್ದೀರಿ. ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಬೈರೇಗೌಡರು ಸುಸ್ತಿ ಬಡ್ಡಿಯನ್ನು ಏತಕ್ಕೆ ನೀವು ವಜಾ ಮಾಡಬಾರದು, ಅದರಿಂದ ಪ್ರಯೋಜನ ಬರುತ್ತದೆ, ಏತಕ್ಕೆ ಮಾಡಬಾರದೆಂದು ಹೇಳಿದ್ದಾರೆ.

ಶ್ರೀ ಸಿ.ಬೈರೇಗೌಡ:- ಬಡ್ಡಿ ಮತ್ತು ಸುಸ್ತಿ ಬಡ್ಡಿ ಏತಕ್ಕೆ ವಜಾ ಮಾಡಬಾರದೆಂದು ಹೇಳಿದ್ದೇನೆ.

ಶ್ರೀ ಎಂ.ವೀರಪ್ಪಮೊಯಿಲಿ:- ಈ ತರಹಮಾಡಿದರೆ ರೈತರಿಗೆ ಹೆಚ್ಚು ಪ್ರಯೋಜನ ಆಗಬಹುದೆಂದು ತಾವು ಹೇಳಿದ್ದೀರಿ. ಸರ್ಕಾರ ತನ್ನದೇ ಆದಂತಹ ವಿವೇಚನೆಯಿಂದ ರೈತರಿಗೆ ಅನುಕೂಲವಾಗುವಂತೆ ಕೆಲವು ಯೋಜನೆಗಳನ್ನು ಮಾಡಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಮುಖ್ಯಮಂತ್ರಿಗಳು ರೈತರ ಪೂರ್ತಿ ಸಾಲ ಮನ್ನಾ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ಯಡಿಯೂರಪ್ಪನವರು ಒಂದು ದಾಖಲೆಯನ್ನು ಕೊಟ್ಟಿದ್ದಾರೆ. ಆ ದಾಖಲೆಗಳನ್ನು ಪರಿಶೀಲನೆ ಮಾಡಿ ಸೂಕ್ತವಾದ ನಿರ್ಣಯ ಕೊಡಲಿಕ್ಕೆ ನಮಗೆ ಸಮಯ ಕೊಡಿ, ನಾವು ವಿಚಾರ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಆ ತೀರ್ಮಾನ ಆಗುವವರೆಗೆ ಸಾಲ ವಸೂಲಾತಿಯನ್ನು ನಿಲ್ಲಿಸಬೇಕು.

ಶ್ರೀ ಎಂ.ವೀರಪ್ಪ ಮೊಯಿಲಿ:- ಈಗಾಗಲೇ ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. 10 ಸಾವಿರದೊಳಗಿನ ಸಾಲ ವಸೂಲಾತಿಯನ್ನು ನಿಲ್ಲಿಸಬೇಕೆನ್ನುವ ಬಗ್ಗೆ ತೀರ್ಮಾನ ಮಾಡಿದ್ದೇವೆ, ಅದರ ಪ್ರಕಾರ ನಾವು ಸಾಲ ವಸೂಲಾತಿಯನ್ನು ನಿಲ್ಲಿಸುತ್ತೇವೆಂದು ಹೇಳಿದ್ದೇವೆ.

ಶ್ರೀ ಬಿ.ಹೆಚ್.ಬನ್ನಿಕೋಡ್:- ನಿಲ್ಲಿಸಿಲ್ಲ, ಸಾಲವನ್ನು ವಸೂಲಿ ಮಾಡುವುದಕ್ಕೆ ಸರ್ಕಾರದ ಆದೇಶವಿದೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ಬನ್ನಿಕೋಡ್‌ರವರೆ, ದಯಮಾಡಿ ತಾವು ಸ್ವಲ್ಪ ದಾರಿಗೆ ಬನ್ನಿ.

ಶ್ರೀ ಬಿ.ಹೆಚ್.ಬನ್ನಿಕೋಡ್:- ನೀವು ಈ ರೀತಿ ಹೇಳುವಾಗ ನಾವು ಇಂಟರ್‌ಫಿಯರ್ ಆಗಬೇಕಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಿಮ್ಮ ನಿಲುವಿನಿಂದ ರೈತರು ತೊಂದರೆಗೆ ಸಿಕ್ಕುತ್ತಿದ್ದಾರೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಮ್ಮ ಆದೇಶವನ್ನು ಮೀರಿ ಕೆಲವು ಕಡೆ ವಸೂಲಾತಿಯಾಗುತ್ತಿದ್ದರೆ ಅದು ಯಾವ ಕಡೆಯೆಂದು ನಿರ್ದಿಷ್ಟವಾಗಿ ನಮಗೆ ತಿಳಿಸಿ. ಮಾನ್ಯ ಮೂಧುಸ್ವಾಮಿಯವರು ಹೇಳಿದ ಪ್ರಕಾರ ನಿರ್ದಿಷ್ಟವಾಗಿ ಹೇಳಿ.

ಶ್ರೀ ವಾಟಾಳ್ ನಾಗರಾಜ್:- ಮೊದಲು ದಾವಾ ಹಾಕುವುದನ್ನು ನಿಲ್ಲಿಸಿ.

ಶ್ರೀ ಎಂ.ವೀರಪ್ಪ ಮೊಯಿಲಿ:- 10 ಸಾವಿರ ಒಳಗಡೆ ಇರತಕ್ಕ ಸಾಲವನ್ನು ವಸೂಲಿ ಮಾಡಲಿಕ್ಕೆ ದಾವಾ ಹಾಕುತ್ತಿದ್ದರೆ ಅದನ್ನು ನಿಲ್ಲಿಸಬಹುದು. ಅದರ ಬಗ್ಗೆ ನಾವು ಕ್ರಮ ಕೂಡ ತೆಗೆದುಕೊಳ್ಳುತ್ತೇವೆ. ಸಾಲ ಮನ್ನಾ ವಿಚಾರದಲ್ಲಿ ಬಹಳ ನಿರ್ದಿಷ್ಟವಾದ ಆದೇಶವನ್ನು ಕೊಟ್ಟಿರುವುದರಿಂದ ಇದು ಈ ರೀತಿಯಾಗಿದೆ. ಮಾನ್ಯ ಜಾಲಪ್ಪನವರ ಗ್ರಿವೆನ್ಸಸ್ ಬೇರೆ. ಸಹಕಾರ ಸಚಿವರು ಚುನಾವಣಾ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡುತ್ತಾರೆ, ಇಂತರ ಒಂದು ನಿರ್ದಿಷ್ಟ, ಕಾರ್ಯಕ್ರಮಕ್ಕೆ ಕೈಹಾಕಿದರೆ ದಯವಿಟ್ಟು ಕೇಳಿ. ಅದಕ್ಕೆ ಕಾರಣ ಏನು ಮತ್ತು ಅದು ಸಾಧಾರಣವಾಗಿದೆ, ಅಥವಾ ಕಾರಣ ಇಲ್ಲದೆ, ಯಾವುದೇ ನ್ಯಾಯವಿಲ್ಲದೆ ಮಾಡಿದ್ದಾರೋ ಎಂದು ವಿಚಾರಗಳನ್ನು ಚರ್ಚೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆದರೆ ತಾವು ಜನರಲ್ ಆಗಿ ಸಹಕಾರ ಚುನಾವಣೆಯಲ್ಲೇ ಕೈಹಾಕುತ್ತಿದ್ದಾರೆ ಎಂದು ಹೇಳಿದರೆ blind allegations ಆಗುತ್ತದೆ.

ಶ್ರೀ ಆರ್.ಎಲ್.ಜಾಲಪ್ಪ:- ನಮಗೆ ದುರ್ದೈವದಿಂದ ಹೇಳುವುದಕ್ಕೆ ಆಗಲಿಲ್ಲ. ಸಹಕಾರ ಇಲಾಖೆ ಬಗ್ಗೆ ಮಾತನಾಡುವುದಕ್ಕೆ ಆಗಲಿಲ್ಲ. ಇಲ್ಲಿ ಹೆಚ್ಚಿಗೆ ಮಾತನಾಡುವುದಕ್ಕೆ ಅವಕಾಶ ಇಲ್ಲ. ಅದನ್ನು ನಾವು ಪ್ರೆಸ್ ಕಾನ್ಫರೆನ್ಸ್ ಮಾಡಿದಾಗ ಏನೇನು ಮಾಡಿದ್ದೀರಿ ಎಂದು ಹೇಳುತ್ತೇವೆ.

ಉಪಾಧ್ಯಕ್ಷರು:- ಯಾವುದಾದರೂ ನಿರ್ದಿಷ್ಟ ಪ್ರಕರಣ ಇದ್ದರೆ ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬನ್ನಿ.

ಶ್ರೀ ಎಂ.ವೀರಪ್ಪ ಮೊಯಿಲಿ :- ಅದನ್ನು ಹೇಳುವುದು ಬಿಡುವುದು ತಮಗೆ ಸೇರಿದ್ದು. ಆದರೆ ಜನರಲ್ ಆಗಿ ಕಾಮೆಂಟ್ ಮಾಡಿದರೆ ಏನು ಅರ್ಥವಾಗುತ್ತದೆ ಎಂದರೆ ಸಹಕಾರ ಚುನಾವಣೆಯಲ್ಲಿ ನಾವು ಹಸ್ತಕ್ಷೇಪ ಮಾಡುತ್ತಿದ್ದೇವೆ ಎಂದು ಅರ್ಥವಾಗುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ . . . .

ಶ್ರೀ ವಾಟಾಳ್ ನಾಗರಾಜ್:- ದಾವೆ ಹಾಕುವುದಿಲ್ಲ ಎಂದು ಒಂದು ಆದೇಶ ಹೊರಟು ಬಿಡಲಿ. ಇದರಿಂದ ಅನುಕೂಲವಾಗುತ್ತದೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಏನು ಆಶ್ವಾಸನೆ ಕೊಟ್ಟಿದ್ದಾರೆ, ಅದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತೇವೆ ಎಂದು ನಾನು ಪುನರುಚ್ಚಾರ ಮಾಡುತ್ತೇನೆ.

(ಗೊಂದಲ)

(2) ಹಾಸನದಲ್ಲಿ ಕುಡಿಯುವ ನೀರಿನ ಅಭಾವ .

+ ಶ್ರೀ ಕೆ.ಎಚ್.ಹನುಮೇಗೌಡ:- ನಾನು ಇಪ್ಪತ್ತು ದಿವಸಗಳ ಹಿಂದೆ ಒಂದು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೆ. ಹಾಸನದಲ್ಲಿ ಕುಡಿಯುವ ನೀರು ಇಲ್ಲದೆ ಬಹಳ ತೊಂದರೆಯಾಗಿದೆ. ಏಳೆಂಟು ದಿವಸಗಳಿಂದ ಕೆಲವು ನಲ್ಲಿಗಳಲ್ಲಿ ಒಂದು ಹನಿ ನೀರು ಬಂದಿಲ್ಲ. ಮೊನ್ನೆ ನಾನು ಊರಿಗೆ ಹೋಗಿದ್ದೆ. ನೀರು ಸ್ವಚ್ಛ ಇಲ್ಲದೆಯೋ ಏನೋ ಅಥವಾ ಏನು ತಿಂದರೋ ಏನೋ ನೂರಾರು ಜನರಿಗೆ ವಾಂತಿ, ಭೇದಿಯಾಗಿ ಬಡ ಜನತೆ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದಾರೆ. ಯಾವ ಆಸ್ಪತ್ರೆಯಲ್ಲೂ ಜಾಗ ಇಲ್ಲ. ಈ ವಿಚಾರವನ್ನು ಯಾರ ಗಮನಕ್ಕೆ ತಂದರೂ ಅವರು ಗಮನಹರಿಸುತ್ತಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಿ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು